# ರಾಮಕೃಷ್ಣ ಮಠ

**ನಾಟ್ಟರಂಪಲ್ಲಿ, ವೆಲ್ಲೂರು ಜಿಲ್ಲೆ, ತಮಿಳುನಾಡು 635 852**
**ಫೋನ್: 04179-635852; e-mail: mail@srknattarmpalii.org.in;**
**Website: www.srknattarampalli.org.in**

## ಒಂದು ಮನವಿ



ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರವು ಪಶ್ಚಿಮಬಂಗಾಳದ ಬೇಲೂರುಮಠದಲ್ಲಿದೆ. ತಮಿಳು ನಾಡಿನ ವೆಲ್ಲೂರು ಜಿಲ್ಲೆಯಲ್ಲಿರುವ ನಾಟ್ಟರಂಪಲ್ಲಿ ರಾಮಕೃಷ್ಣ ಮಠವು ಅದರ ಒಂದು ಶಾಖಾಕೇಂದ್ರವಾಗಿದೆ. ಇದು 1908ರಲ್ಲಿ ಸ್ಥಾಪನೆಗೊಂಡಿತು. ಅಂದಿನಿಂದ ಈ ಮಠವು ನಾಟ್ಟರಂಪಲ್ಲಿಯ ಸುತ್ತಮುತ್ತ ಇರುವ 128 ಗ್ರಾಮಗಳಲ್ಲಿ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಮುಖ್ಯವಾಗಿ ಗ್ರಾಮೀಣ ಬಡಜನತೆಯ ಆರೋಗ್ಯ ಮತ್ತು ಶಿಕ್ಷಣ ಸೇವೆಗೆ ವಿಶೇಷ ಮಹತ್ವ ನೀಡಿರುವ ಈ ಸಂಸ್ಥೆಯು, ಸುತ್ತಮುತ್ತಲ ಜನತೆಯ ಸ್ಥಳೀಯ ಆವಶ್ಯಕತೆಗಳನ್ನು ಪರಿಣಾಮಕಾರಿಯಾಗಿ ಪೂರೈಸುತ್ತಲಿದೆ.

'ಸ್ವಾಮಿ ಶಿವಾನಂದ ಅನಾಥ ವಿದ್ಯಾರ್ಥಿ ನಿಲಯ'ವು ಮಠದ ಒಂದು ಪ್ರಮುಖ ಸೇವಾ ಅಂಗವಾಗಿದೆ. ಇದು ಕಳೆದ 32 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮೀಣ ಬಡಕುಟುಂಬಗಳಿಗೆ ಸೇರಿದ 50 ಮಕ್ಕಳು ಇಲ್ಲಿ ಆಶ್ರಯವನ್ನು ಪಡೆದಿದ್ದಾರೆ. ಇವರಲ್ಲಿ ಕೆಲವರು ಅನಾಥರಾದವರು, ಮತ್ತೆ ಕೆಲವರು ಭಾಗಶಃ ಅನಾಥರು. ಇವರ ಸರ್ವತೋಮುಖ ಬೆಳವಣಿಗೆಗೆ ಈ ಸಂಸ್ಥೆ ಶ್ರಮವಹಿಸುತ್ತಿದೆ. ಈ ಮಕ್ಕಳಿಗೆ ವಸತಿ, ಆಹಾರ, ಬಟ್ಟೆ ಮೊದಲಾದ ಅಗತ್ಯಗಳನ್ನು ಪೂರೈಸಲಾಗುತ್ತಿದೆ. ಅಷ್ಟೇ ಅಲ್ಲದೆ, ವೈದ್ಯಕೀಯ ಸೌಲಭ್ಯವನ್ನೂ ಒದಗಿಸಿದೆ. ಶಾಲೆಯ ಪಠ್ಯವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿಶೇಷ ತರಗತಿಗಳನ್ನೂ ಏರ್ಪಡಿಸಲಾಗಿದೆ. ಇಲ್ಲಿ ಮಕ್ಕಳು ಐದು ವರ್ಷ ವಾಸಿಸುತ್ತಾರೆ. ಈ ಅವಧಿಯಲ್ಲಿ ಅವರು ಒಂದೇ ಒಂದು ರೂಪಾಯಿಯನ್ನೂ ನೀಡಬೇಕಾಗಿಲ್ಲ. 6ನೆಯ ತರಗತಿಯಿಂದ 10ನೆಯ ತರಗತಿಯವರೆಗೆ ವಿದ್ಯಾರ್ಥಿಗಳಿಗೆ ಇಲ್ಲಿ ಇರಲು ಅವಕಾಶ ನೀಡಲಾಗಿದೆ. ಅನಂತರ ಕೂಡ, ಶಿಕ್ಷಣವನ್ನು ಮುಂದುವರೆಸಲು ಇಚ್ಛಿಸುವ ಮಕ್ಕಳಿಗೆ ವಸತಿ ಸೌಲಭ್ಯವನ್ನು ವಿಸ್ತರಿಸಲಾಗುವುದು. ಅವರು ಹೆಚ್ಚಿನ ವಿದ್ಯಾಭ್ಯಾಸ, ವೃತ್ತಿಪರ ಶಿಕ್ಷಣಗಳನ್ನು ಮುಂದುವರಿಸಲು ಇದರಿಂದ ಸಹಾಯವಾಗುತ್ತದೆ.

ಆದರೆ ಈ ವಿದ್ಯಾರ್ಥಿನಿಲಯಕ್ಕೆ ಪ್ರತ್ಯೇಕ ಕಟ್ಟಡವಿಲ್ಲ. ಅಡುಗೆ ಮನೆ, ಊಟದ ಮನೆಗಳು ಕೂಡ ಪ್ರತ್ಯೇಕವಾಗಿಲ್ಲ. ಹಣಕಾಸಿನ ಕೊರತೆಯ ಕಾರಣ, ವಿದ್ಯಾರ್ಥಿನಿಲಯಕ್ಕೆ ಕಟ್ಟಡವನ್ನು ನಿರ್ಮಾಣ ಮಾಡಲು ಇದುವರೆಗೂ ಸಾಧ್ಯವಾಗಿಲ್ಲ. ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವದ (1863-2013) ಅಂಗವಾಗಿ, ವಿದ್ಯಾರ್ಥಿನಿಲಯಕ್ಕೆ ಒಂದು ನೂತನ ಕಟ್ಟಡವನ್ನು ನಿರ್ಮಾಣ ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಅಲ್ಲಿ ಅವರು ಸುಖವಾಗಿ, ಉಲ್ಲಾಸ ಮತ್ತು ಉತ್ಸಾಹಗಳಿಂದ ತಮ್ಮ ಅಧ್ಯಯನದ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ಈ ಕಟ್ಟಡದ ನಿರ್ಮಾಣದ ವೆಚ್ಚ 60 ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

**ಆಶ್ರಮವು ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶದಲ್ಲಿದ್ದು, ಇಲ್ಲಿ ಧನಸಹಾಯ ದೊರಕುವ ಅವಕಾಶಗಳು ಕಡಮೆ. ಆದ್ದರಿಂದ ಈ ಪುಣ್ಯಕಾರ್ಯಕ್ಕೆ ಉದಾರ ಕಾಣಿಕೆಯನ್ನು ನೀಡಬೇಕೆಂದು ತಮ್ಮಲ್ಲಿ ಹೃತ್ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇವೆ. ಹಾಗೆಯೇ ಈ ಯೋಜನೆಯ ಬಗ್ಗೆ ನಿಮ್ಮ ಸ್ನೇಹಿತರಿಗೆ, ಬಂಧುಗಳಿಗೆ ತಿಳಿಸಿಹೇಳಬೇಕೆಂದೂ, ಆ ಮೂಲಕ ಈ ಉದಾತ್ತ ಕಾರ್ಯದಲ್ಲಿ ನೀವೂ ಕೈಜೋಡಿಸಬೇಕೆಂದೂ ಕೇಳಿಕೊಳ್ಳುತ್ತೇವೆ.** ನಿಮ್ಮ ದೇಣಿಗೆಗಳನ್ನು **'Ramakrishna Math, Nattarmpalli'** ಹೆಸರಿನಲ್ಲಿನ ಬರೆದ ಚೆಕ್, ಡಿ.ಡಿ.ಗಳ ಮೂಲಕ ಮೇಲಿನ ವಿಳಾಸಕ್ಕೆ ಕಳಿಸಿಕೊಡಬಹುದು. ಎಲ್ಲ ದೇಣಿಗೆಗಳಿಗೂ ಆದಾಯಕರ ನಿಯಮ 80-G ಅನ್ವಯ ತೆರಿಗೆ ವಿನಾಯತಿ ಇದೆ.

ಶುಭಹಾರೈಕೆಗಳೊಂದಿಗೆ, ಕೃತಜ್ಞತಾಪೂರ್ವಕವಾಗಿ

**ಭಗವತ್ಸೇವೆಯಲ್ಲಿ ತಮ್ಮವ,**

**ಸ್ವಾಮಿ ತ್ಯಾಗರಾಜಾನಂದ**
**ಅಧ್ಯಕ್ಷರು**

# ೨೧ ನೆಯ ಶತಮಾನದಲ್ಲಿ ಶ್ರೀರಾಮಕೃಷ್ಣರ ಜೀವನ– ಸಂದೇಶಗಳ ಪ್ರಸ್ತುತತೆ



*(ಭಾರತದೇಶ ಬ್ರಿಟಿಷರ ದಾಸ್ಯದಿಂದ ಆಗಸ್ಟ್ ೧೫, ೧೯೪೭ ರಂದು ಬಿಡುಗಡೆಯಾಯಿತು. ಆದರೂ ಇಂದು ಕೂಡ, ಸಾಂಸ್ಕೃತಿಕ ಹಾಗೂ ಆರ್ಥಿಕ ದಾಸ್ಯ ಮುಂದುವರೆದೇ ಇದೆ. ೨೧ ನೆಯ ಶತಮಾನದ ಎರಡನೆಯ ದಶಕದ ಈ ಸನ್ನಿವೇಶದಲ್ಲಿ ನಿರ್ದಿಷ್ಟವಾಗಿ ಭಾರತದಲ್ಲಿ ಮತ್ತು ಸಾಮಾನ್ಯವಾಗಿ ಇಡೀ ಪ್ರಪಂಚದಲ್ಲಿ, ಶ್ರೀರಾಮಕೃಷ್ಣರು ಹೇಗೆ ಪ್ರಸ್ತುತವಾಗಬಲ್ಲರು ಎಂಬ ಸರಳ ವಿಶ್ಲೇಷಣೆ ಇಲ್ಲಿದೆ.)*

೨೧ ನೆಯ ಶತಮಾನವು ನಾವೀಗ ಜೀವಿಸಿರುವ ಕಾಲಮಾನ. ಇದನ್ನು 'ಜಾಗತೀಕರಣದ ಯುಗ' ಅಥವಾ 'ಉದಾರೀಕರಣದ ಯುಗ' ಎಂದು ಕೆಲವರು ಕರೆಯುವರು. ಭಯೋತ್ಪಾದನೆಯು ಈ ಅವಧಿಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿರುವುದರಿಂದ 'ಭಯೋತ್ಪಾದನೆಯ ಯುಗ' ಎಂದೂ ಮತ್ತೆ ಕೆಲವರು ಕರೆಯುವರು. ಕೊಳ್ಳುಬಾಕತನವು ವಿಪರೀತವಾಗಿರುವುದರಿಂದ 'ಕೊಳ್ಳುಬಾಕತನದ ಯುಗ' ಎಂದೂ ಇದನ್ನು ಕರೆಯಬಹುದು. ಅದಲ್ಲದೆ, ಈ ಕಾಲಮಾನದಲ್ಲಿ ಎಲ್ಲ ರೀತಿಯ ಸಂಘಸಂಸ್ಥೆಗಳೂ, ವ್ಯವಸ್ಥೆಗಳೂ ತಮ್ಮ ಪವಿತ್ರತೆಯನ್ನೂ, ನ್ಯಾಯಪರತ್ವವನ್ನೂ ಕಳೆದುಕೊಳ್ಳುತ್ತಿರುವುದನ್ನು ಕೂಡ ಕಾಣುತ್ತೇವೆ. ಸರ್ಕಾರದ ರಾಜ್ಯಾಂಗ ಕಾರ್ಯಾಂಗ ನ್ಯಾಯಾಂಗಗಳು, ವಾಣಿಜ್ಯ ವಹಿವಾಟು ವ್ಯವಸ್ಥೆ, ಧಾರ್ಮಿಕ ಹಾಗೂ ಸಾಮಾಜಿಕ ಸೇವಾಸಂಘಟನೆಗಳು – ಹೀಗೆ ಸಮಾಜದ ಎಲ್ಲ ಭಾಗಗಳ ಒಕ್ಕೂಟಗಳು ಅಪಮೌಲ್ಯಗೊಳ್ಳುತ್ತಿರುವುದು ಈ ಕಾಲದ ದುರದೃಷ್ಟ. ಹೀಗಾಗಿ ಇದು 'ಅಪಮೌಲ್ಯದ ಯುಗ'ವೂ ಆಗಿ ಪರಿಣಮಿಸಿದೆ. ಹೀಗೆ ವಿವಿಧ ದೃಷ್ಟಿಕೋನಗಳಿಂದ ಈ ಯುಗವನ್ನು ಹೆಸರಿಸಬಹುದು. ಆದರೆ ಒಂದು ಮಾತಂತೂ ನಿಜ. ಈ ಶತಮಾನವು ಆರಂಭಗೊಳ್ಳುವಾಗ ಜನರು ಅನೇಕ ಆಶೋತ್ತರಗಳನ್ನು ಇಟ್ಟುಕೊಂಡಿದ್ದರು. ತಾಂತ್ರಿಕತೆಯ ಅಭೂತಪೂರ್ವ ಬೆಳವಣಿಗೆ, ವಾಣಿಜ್ಯದ ಉದಾರೀಕರಣ, ಮಾರುಕಟ್ಟೆಯ ಜಾಗತೀಕರಣ – ಇವು ಮಾನವನ ಜೀವನವನ್ನು ಹೆಚ್ಚು ಸಂಪದ್ಭರಿತವನ್ನಾಗಿಸುತ್ತವೆ ಎಂದು ಎಣಿಸಿದ್ದರು; ಮಾನವ ಜೀವನಕ್ಕೆ ಸೂಕ್ತ ಭದ್ರತೆ ದೊರಕುತ್ತದೆ ಎಂದು ಬಗೆದಿದ್ದರು. ಆದರೆ ಈ ಆಕಾಂಕ್ಷೆಗಳು ಕೈಕೂಡಲಿಲ್ಲ; ಜನರ ಬದುಕು ಹಸನಾಗಲಿಲ್ಲ. ಅದಕ್ಕೆ ಬದಲಾಗಿ, ಕಳೆದ ಕೆಲವು ವರ್ಷಗಳಿಂದ ಜಾಗತಿಕವಾಗಿ ಆಹಾರದ ಬೆಲೆ ಏರುತ್ತಲೇ ಇದೆ; ಹೀಗಾಗಿ ಬಡರಾಷ್ಟ್ರಗಳ ಮತ್ತು ಅಭಿವೃದ್ಧಿಶೀಲ ದೇಶಗಳ ಬಡ ಮತ್ತು ಮಧ್ಯಮ ವರ್ಗದ ಜನರು ತತ್ತರಿಸುವಂತಾಗಿದೆ.

ಈ ಶತಮಾನದ ಕೆಲವು ವಿಪರೀತ ಬೆಳವಣಿಗೆಗಳನ್ನು ಈ ರೀತಿ ಪಟ್ಟಿ ಮಾಡಬಹುದು:

**೧. ಉದಾರೀಕರಣದ ಹೆಸರಿನಲ್ಲಿ ಸಾಂಸ್ಕೃತಿಕ ಹಾಗೂ ಆರ್ಥಿಕ ವಸಾಹತುಶಾಹಿ; ಇದರಿಂದಾಗಿ ಶ್ರೀಮಂತ ದೇಶಗಳಿಗೆ ಹೆಚ್ಚು ಹೆಚ್ಚು ಲಾಭ ಮತ್ತು ಬಡ ದೇಶಗಳಲ್ಲಿ ಸಾಂಸ್ಕೃತಿಕ ಮತ್ತು ಆರ್ಥಿಕ ಅಪಮೌಲ್ಯ.**

**೨. ಧಾರ್ಮಿಕ ಹಾಗೂ ಜನಾಂಗೀಯ ವಿಚ್ಛೇದನೆ ಮತ್ತು ದ್ವೇಷಗಳ ಪರಿಣಾಮವಾಗಿ ಭೀಕರವಾಗಿ ತಾಂಡವವಾಡುತ್ತಿರುವ ಭಯೋತ್ಪಾದನೆ.**

**೩. ಕೌಟುಂಬಿಕ ಮೌಲ್ಯಗಳ ಅವಗಣನೆ – ಹೆಚ್ಚುತ್ತಿರುವ ಸ್ವಾರ್ಥ ಮತ್ತು ವೈಯಕ್ತಿಕ ಹಿತಾಸಕ್ತಿ.**

**೪. ಅತ್ಯಧಿಕವಾಗಿ ಹೆಚ್ಚುತ್ತಿರುವ ಭೋಗವಸ್ತುಗಳ ಉಪಭೋಗ ಮತ್ತು ಕೊಳ್ಳುಬಾಕ ಸಂಸ್ಕೃತಿಯ ಅಗಾಧವಾದ ಹರಡುವಿಕೆ.**

**೫. ಧಾರ್ಮಿಕ, ರಾಜಕೀಯ, ಆಡಳಿತ, ವಾಣಿಜ್ಯ – ಹೀಗೆ ಸಮಾಜದ ಎಲ್ಲ ರಂಗಗಳಲ್ಲಿ ಅಪವಿತ್ರತೆ ಮತ್ತು ಭ್ರಷ್ಟಾಚಾರದ ತಾಂಡವ.**

ಇವು ಕೇವಲ ೨೧ ನೆಯ ಶತಮಾನದ ಬೆಳವಣಿಗೆಗಳು ಎಂದೇನೂ ಹೇಳಲಾಗದು. ಅವು ಹೆಚ್ಚುಕಡಮೆ ಹಿಂದಿನ ಶತಮಾನಗಳಲ್ಲಿಯೂ ಇದ್ದವು. ಯಾವುದೇ ಶತಮಾನದಲ್ಲಾಗಲಿ, ಹೊರಗಿನ ಪರಿಸರ, ಜನರ ವೇಷ–ಭೂಷಣಗಳು, ರಾಜಕೀಯ ಪರಿಸ್ಥಿತಿಗಳು ಮುಂತಾದ ಬಾಹ್ಯ ಸಂಗತಿಗಳು ಬದಲಾಗುತ್ತವೆಯೇ ಹೊರತು, ಮನುಷ್ಯನ ಸ್ವಭಾವವು

ಬಹುತೇಕ ಒಂದೇ ರೀತಿ ಇರುತ್ತದೆ. ಆದರೆ ೨೧ ನೆಯ ಶತಮಾನದಲ್ಲಿ ಮೇಲಿನ ಕೆಡುಕಿನ ಅಂಶಗಳು ಹೆಚ್ಚು ಭೀಕರವೂ ಉಪದ್ರವಕರವೂ ಆಗಿ ಪರಿಣಮಿಸಿರುವುದನ್ನು ನಾವು ಕಾಣುತ್ತೇವೆ. ಇವುಗಳಿಗೆ ಪರಿಹಾರವೇನು? ಇವುಗಳ ಶಮನ ಮಾಡಲಾದೀತೆ? ಇದು ನಮ್ಮ ಮುಂದೆ ಇರುವ ಪ್ರಮುಖ ಸಮಸ್ಯೆ.

### ಮೂಲಭೂತ ಸಮಸ್ಯೆಗಳಿಗೆ ಪರಿಹಾರ

ಮೇಲಿನ ಎಲ್ಲ ಸಮಸ್ಯೆಗಳ ಮೂಲ ಮಾನವನ ಸ್ವಭಾವದಲ್ಲಿ ಅಂತರ್ಗತವಾಗಿರುವ 'ಸ್ವಾರ್ಥ' ಮತ್ತು 'ಕಾಮ' ಎಂದು ಭಾರತೀಯ ಚಿಂತನೆಯು ಸಾವಿರಾರು ವರ್ಷಗಳ ಹಿಂದೆಯೇ ಕಂಡುಕೊಂಡಿತ್ತು. ಅದಕ್ಕೆ ಪರಿಹಾರವಾಗಿ ಭಾರತೀಯ ಋಷಿಮುನಿಗಳು ಕಂಡುಕೊಂಡ ಮಾರ್ಗಗಳೇ 'ಧರ್ಮ' ಮತ್ತು 'ಅಧ್ಯಾತ್ಮ'. ಇಲ್ಲಿ ಧರ್ಮ ಮತ್ತು ಅಧ್ಯಾತ್ಮ – ಈ ಪದಗಳನ್ನು ಬೇರ್ಪಡಿಸಿ ನೋಡಬೇಕು. ಸ್ಥೂಲವಾಗಿ ಹೇಳುವುದಾದರೆ, ನಮ್ಮ ನೈಜ ಸ್ವರೂಪದ ಅರಿವನ್ನು ಮಾಡಿಕೊಳ್ಳಲು ಕೈಗೊಳ್ಳುವ ಪ್ರಜ್ಞಾಪೂರ್ವಕ ಪ್ರಯತ್ನವನ್ನೇ ನಾವು 'ಅಧ್ಯಾತ್ಮ' ಎಂದು ಕರೆಯಬಹುದು. ಈ ಪ್ರಜ್ಞಾಪೂರ್ವಕ ಪ್ರಯತ್ನವು ನಮ್ಮ ಬಾಹ್ಯ ಆಚರಣೆಗಳಲ್ಲಿ, ನಡೆನುಡಿಗಳಲ್ಲಿ ನೈತಿಕ ಹಾಗೂ ನ್ಯಾಯಯುಕ್ತ ಆಚರಣೆಯ ಮೂಲಕ, ವ್ಯಕ್ತಿ ಹಾಗೂ ಸಮಾಜದ ಹಿತಕ್ಕಾಗಿ ಪ್ರಕಟಗೊಳ್ಳುವುದನ್ನೇ 'ಧರ್ಮ' ಎಂದು ಕರೆಯಬಹುದು. ಇನ್ನೊಂದು ದೃಷ್ಟಿಯಲ್ಲಿ ನೋಡುವುದಾದರೆ, ಉನ್ನತ ಆಧ್ಯಾತ್ಮಿಕ ಜೀವನಕ್ಕಾಗಿ ನಾವು ನಡೆಸಬೇಕಾದ ಪ್ರಾಥಮಿಕ ಸಿದ್ಧತೆಯನ್ನು ನಾವು 'ಧರ್ಮ' ಎಂದು ಕರೆಯಬಹುದು. ಅದಕ್ಕೆ ಅಧ್ಯಾತ್ಮ ತತ್ತ್ವದ ಹಿನ್ನೆಲೆ, ಮಾರ್ಗದರ್ಶನ, ಬೆಳಕು ಇದ್ದಾಗ ಮಾತ್ರ ಅದು ಅರ್ಥಪೂರ್ಣವಾಗುತ್ತದೆ. ಇಲ್ಲದಿದ್ದರೆ, ಡಾಂಭಿಕತೆ ಎನ್ನಿಸಿಕೊಳ್ಳುತ್ತದೆ. ಈ ಯುಗದಲ್ಲಿ ಶ್ರೀರಾಮಕೃಷ್ಣರು ನೀಡಿದ ಮಹೋತ್ತಮ ಕೊಡುಗೆಯೆಂದರೆ, ಧರ್ಮ ಮತ್ತು ಅಧ್ಯಾತ್ಮಗಳ ನೈಜ ಪರಿಜ್ಞಾನವನ್ನು ಸಾಮಾನ್ಯ ಜನತೆಯಲ್ಲಿಯೂ ಮೂಡಿಸಿದ್ದು; ಆ ಮೂಲಕ ಜಡ್ಡುಗಟ್ಟಿದ್ದ ಸನಾತನಧರ್ಮವನ್ನು ಕ್ರಿಯಾಶೀಲವನ್ನಾಗಿ, ಚೇತೋಹಾರಿಯನ್ನಾಗಿ, ನವೀನವನ್ನಾಗಿ ಪರಿವರ್ತಿಸಿದ್ದು. ಹೀಗೆ ಭಾರತೀಯ ಧರ್ಮವನ್ನು ನೂತನ ಯುಗಕ್ಕೆ ಪ್ರಸ್ತುತವನ್ನಾಗಿ ಮಾಡಿದ ಶ್ರೇಯಸ್ಸು ಶ್ರೀರಾಮಕೃಷ್ಣರಿಗೆ ಸೇರುತ್ತದೆ.

ಶ್ರೀರಾಮಕೃಷ್ಣರು ಕಾಳೀಮಾತೆಯ ಮಣ್ಣಿನ ಮೂರ್ತಿಯನ್ನು ಪೂಜಿಸಲು ಆರಂಭಿಸಿದರು. ಅದರಲ್ಲಿ ಚಿನ್ಮಯ ಮೂರ್ತಿಯನ್ನು ಕಾಣಲು ಪ್ರಯತ್ನಿಸಿದರು. ಇದೇ ಧರ್ಮ. ಕಡೆಗೆ ಕಾಳಿಯ ಚಿನ್ಮಯರೂಪದ ಅನುಭವ ಅವರಿಗಾಯಿತು. ಇದೇ ಅಧ್ಯಾತ್ಮ. ಒಟ್ಟು ಸಮಷ್ಟಿಯ ದೃಷ್ಟಿಯಿಂದ ಶ್ರೀರಾಮಕೃಷ್ಣರು ಮಾಡಿದ ಮಹಾನ್ ಕಾರ್ಯವೂ ಇದೇ. ಅವರು ಡಂಭಾಚಾರ, ಮೂಢನಂಬಿಕೆ, ಕಠಿಣ ಸಾಮಾಜಿಕ ಕಟ್ಟುಪಾಡು – ಮುಂತಾದ ಅನಿಷ್ಟಗಳಿಂದ ನಿರ್ಜೀವವಾಗಿದ್ದ ಹಿಂದೂಧರ್ಮಕ್ಕೆ ಪರಿಶುದ್ಧ ಧಾರ್ಮಿಕ ಭಾವನೆಯ ಅಮೃತಸಿಂಚನವನ್ನು ಮಾಡಿಸಿದರು. ಹಾಗೆಯೇ ಆ ಧಾರ್ಮಿಕ ಭಾವನೆಗೆ ಅತ್ಯುನ್ನತ ಆಧ್ಯಾತ್ಮಿಕ ಆದರ್ಶದ ದಿಶೆಯನ್ನು ತೋರಿಕೊಟ್ಟರು. ಆ ಮೂಲಕ ಆಧುನಿಕ ಯುಗದಲ್ಲಿ ಭಾರತದ ಪುನರುತ್ಥಾನಕ್ಕೆ ನಾಂದಿ ಹಾಡಿದರು.

### 'ಧರ್ಮ' ಮತ್ತು 'ಅಧ್ಯಾತ್ಮ' ಗಳಿಗೆ ವಿಶಾಲಾರ್ಥ

ನೂರಾರು ವರ್ಷಗಳಿಂದ ಧರ್ಮ ಮತ್ತು ಅಧ್ಯಾತ್ಮಗಳು ವೈಯಕ್ತಿಕ ಆಯಾಮದ ಹಂದರದಿಂದ ಹೊರಗೆ ಬಂದಿರಲಿಲ್ಲ. ಶ್ರೀರಾಮಕೃಷ್ಣರು ಅವುಗಳನ್ನು ಸಮಾಜಮುಖಿಯನ್ನಾಗಿ, ಸಮಷ್ಟಿಹಿತಪರವನ್ನಾಗಿ ಪರಿವರ್ತಿಸಿದವರಲ್ಲಿ ಅಗ್ರಗಣ್ಯರು. ಹೀಗಾದಾಗ ಧರ್ಮವು ವೈಯಕ್ತಿಕ ಆಧ್ಯಾತ್ಮಿಕ ಸಿದ್ಧಿಗೆ ಮಾತ್ರ ಪರಿಮಿತವಾಗುವುದಿಲ್ಲ, ಸಮಾಜ, ದೇಶ, ವಿಶ್ವಗಳೆಂಬ ಸಮಷ್ಟಿಯ ಹಿತಕ್ಕೂ ಕಾರಣವಾಗುತ್ತದೆ. ಇದನ್ನು ಸಾಧಿಸಿತೋರಿಸಿದ ಮಹಾನುಭಾವರು, ಶ್ರೀರಾಮಕೃಷ್ಣರು. ಈ ನೂತನ ಮತ್ತು ಕ್ರಾಂತಿಕಾರಕ ಸಂದೇಶದ ಕೆಲವು ಉಪಾಂಶಗಳನ್ನು ಹೀಗೆ ಪಟ್ಟಿಮಾಡಬಹುದು:

೧. ಆಧ್ಯಾತ್ಮಿಕ ಭಾವನೆಯಿಂದ ಮನುಷ್ಯನಲ್ಲಿನ ಸ್ವಾರ್ಥಬುದ್ಧಿ ಕಡಮೆಯಾಗುತ್ತದೆ. ತನ್ನನ್ನು ಇತರರಲ್ಲಿ ಕಂಡುಕೊಳ್ಳುವ, ಎಲ್ಲರಲ್ಲೂ ಭಗವಂತನನ್ನೇ ಕಾಣುವ ದೃಷ್ಟಿ ಬೆಳೆಯುತ್ತದೆ. ಇಂತಹ ಉದಾತ್ತ ಪ್ರಜ್ಞೆಯ ಜನರು ಹೆಚ್ಚುಹೆಚ್ಚಾದಂತೆಲ್ಲ, ಅಂತಹ ಸಮಾಜದಲ್ಲಿ ಶಾಂತಿ, ತೃಪ್ತಿಗಳು ನೆಲೆಗೊಳ್ಳುತ್ತವೆ.

೨. ಆಧ್ಯಾತ್ಮಿಕ ದೃಷ್ಟಿಕೋನವು ವ್ಯಕ್ತಿ–ವ್ಯಕ್ತಿಗಳಲ್ಲಿ ಸಹನೆ, ಕ್ಷಮೆ ಮುಂತಾದ ಮಾನವೀಯ ಮೌಲ್ಯಗಳ ಆಚರಣೆಗೆ ಅನುವು ಮಾಡಿಕೊಡುತ್ತದೆ. ಈ ರೀತಿ ಆಧ್ಯಾತ್ಮಿಕತೆಯು ನೈತಿಕತೆಯನ್ನು ದೃಢಪಡಿಸುತ್ತದೆ. ನೈತಿಕ ಮೌಲ್ಯಗಳು ನಮ್ಮನ್ನು ಭೋಗದೃಷ್ಟಿಯಿಂದ ದೂರಮಾಡಿ, ತ್ಯಾಗಬುದ್ಧಿಯುಳ್ಳವರನ್ನಾಗಿ ಮಾಡುತ್ತವೆ. ಈ ಬಗೆಯ ನಿಃಸ್ವಾರ್ಥ ಮನೋಭಾವವು ಸಮಾಜದ ಸ್ವಾಸ್ಥ್ಯಕ್ಕೆ ಇಂದು ಅತ್ಯಂತ ಆವಶ್ಯಕ.

೩. ಅಧ್ಯಾತ್ಮ ದೃಷ್ಟಿಯು ನೈತಿಕತೆಗೆ ಪ್ರೇರಣೆ ಕೊಡುವುದಾದರೂ, ಅದರ ಮುಖ್ಯ ಉದ್ದೇಶ ಭಗವತ್ಸಾಕ್ಷಾತ್ಕಾರ. ಇದನ್ನು ಶ್ರೀರಾಮಕೃಷ್ಣರು ಒತ್ತಿ ಒತ್ತಿ ಹೇಳುತ್ತಿದ್ದರು. ಭಗವಂತನೇ ಸಮಸ್ತ ಮಾನವಜೀವಿತದ ಒರೆಗಲ್ಲು. ಭಗವತ್ಸಾಕ್ಷಾತ್ಕಾರ ಮಾತ್ರವೇ ಎಲ್ಲ ಮತ–ಧರ್ಮ–ಆಚರಣೆಗಳ ಏಕಮಾತ್ರ ಪ್ರಯೋಜನವಾಗಬೇಕು. ಇಲ್ಲದಿದ್ದರೆ ಅವುಗಳಿಗೆ ಯಾವ ಅರ್ಥವೂ ಇರುವುದಿಲ್ಲ.

ಪ್ರಸ್ತುತ ಪ್ರಚಲಿತವಿರುವ ಧರ್ಮಮಾರ್ಗಗಳು, ಆಚರಣೆಗಳು, ನಂಬಿಕೆಗಳು ಮೇಲೆ ವಿವರಿಸಿದ ಪರಿಶುದ್ಧ ಆಧ್ಯಾತ್ಮಿಕ ದೃಷ್ಟಿಯನ್ನು ಜನಸಾಮಾನ್ಯರಲ್ಲಿ ಮೂಡಿಸುತ್ತಿವೆಯೇ? ಬಹುತೇಕ ಇಲ್ಲವೆಂಬ ವಿಷಾದಕರ ಉತ್ತರವನ್ನೇ ನಾವು ನೀಡಬೇಕಾಗುತ್ತದೆ. ಅವು ಜನರನ್ನು ಹೆಚ್ಚು ಹೆಚ್ಚು ಸಂಕುಚಿತ ಬುದ್ಧಿಯುಳ್ಳವರನ್ನಾಗಿಯೂ, ಮತಾಂಧರನ್ನಾಗಿಯೂ ಮಾಡುತ್ತಿರುವುದು ಕರಾಳ ವಾಸ್ತವ. ಧರ್ಮವೆಂಬುದು ಲೌಕಿಕ ಸವಲತ್ತುಗಳನ್ನು ಗಳಿಸಿಕೊಳ್ಳುವ ಅಪಮಾರ್ಗವಾಗಿದೆಯೇ ಹೊರತು, ಆಂತರಿಕ ಪರಿವರ್ತನೆಯ ಸಾಧನವಾಗಿಲ್ಲ. ಇದೇ ಇಂದಿನ ದುರಂತ.

ಈ ಘೋರ ಪರಿಸ್ಥಿತಿಯಿಂದ ನಮ್ಮನ್ನು ಪಾರುಮಾಡುವವರು ಶ್ರೀರಾಮಕೃಷ್ಣರಲ್ಲದೆ ಬೇರೆಯಲ್ಲ. ಅವರ ಜೀವನ–ಸಂದೇಶಗಳು ಈಗಿನ ಕಾಲದಲ್ಲಿ ಕಾಣಬರುತ್ತಿರುವ ಧರ್ಮ ಮತ್ತು ಆಧ್ಯಾತ್ಮಿಕತೆಗಳ ಅಪಮೌಲ್ಯಕ್ಕೆ ರಾಮಬಾಣವಾಗಬಲ್ಲವು; ಆ ಮೂಲಕ ಸಮಾಜಕಲ್ಯಾಣಕ್ಕೆ ಕಾರಣವಾಗಬಲ್ಲವು. ಅದು ಹೇಗೆ? ಶ್ರೀರಾಮಕೃಷ್ಣರು ತಮ್ಮ ಪವಿತ್ರ ವ್ಯಕ್ತಿತ್ವದ ಮೂಲಕ ಪರಿಶುದ್ಧ ಧರ್ಮದ ಉದಾತ್ತ ಆಚರಣೆಯನ್ನು ತೋರಿಸಿಕೊಟ್ಟಿದ್ದಾರೆ. ಧರ್ಮವು ಆಧ್ಯಾತ್ಮಿಕ ಹಂಬಲವಾಗಿ ಅತ್ಯಂತ ಸಹಜವಾಗಿ, ಹೂವು ಅರಳುವಂತೆ ಸುಮನೋಹರವಾಗಿ ಅವರ ಜೀವನದಲ್ಲಿ ವಿಕಾಸ ಹೊಂದಿತು; ತನ್ನ ಚರಮ ಸೀಮೆಯನ್ನು ಸಮಾಧಿ, ಸಾಕ್ಷಾತ್ಕಾರಗಳ ಮೂಲಕ ಕಂಡುಕೊಂಡು ಅವರ ಜೀವನಕ್ಕೆ ಸಾರ್ಥಕತೆಯನ್ನು ತಂದುಕೊಟ್ಟಿತು. ಭಾರತೀಯ ಸಭ್ಯತೆಯ ಪರಾಕಾಷ್ಠೆಯನ್ನು ಶ್ರೀರಾಮಕೃಷ್ಣರ ಜೀವನದಲ್ಲಿ ಕಾಣುತ್ತೇವೆ; ಭಾರತೀಯ ಸಂಸ್ಕೃತಿಯ ಪರಮ ಔನ್ನತ್ಯವನ್ನು ಇಲ್ಲಿ ಪರಿಭಾವಿಸುತ್ತೇವೆ; ಭಾರತೀಯ ಜೀವನಾದರ್ಶದ ಪ್ರಜ್ವಲತೆಯನ್ನು ಇಲ್ಲಿ ಗುರುತಿಸುತ್ತೇವೆ. ಹೀಗೆ ಶ್ರೀರಾಮಕೃಷ್ಣರ ವ್ಯಕ್ತಿತ್ವ, ಜೀವನ ಮತ್ತು ಚಿಂತನೆಗಳಲ್ಲಿ ಧರ್ಮವು ತನ್ನ ನೈಜ ಸ್ರೋತವಾದ ಅಧ್ಯಾತ್ಮವನ್ನು ಕಂಡುಕೊಂಡಿದೆ; ಅಧ್ಯಾತ್ಮವು ಅನುಭೂತಿಯ ಔನ್ನತ್ಯಕ್ಕೆ ಏರಿದೆ; ಅನುಭೂತಿಯು ವೈಯಕ್ತಿಕ ಮಟ್ಟಕ್ಕೆ ನಿಲ್ಲದೆ, ವಿಶ್ವವ್ಯಾಪಕ ಪ್ರೇಮಪ್ರವಾಹವಾಗಿದೆ.

ಹೀಗೆ ಶ್ರೀರಾಮಕೃಷ್ಣರು ಅತ್ಯಂತ ಪ್ರಖರವೂ ಪ್ರಭಾವಶಾಲಿಯೂ ಆದ ಆಧ್ಯಾತ್ಮಿಕ ಶಕ್ತಿಯ ಗಣಿಯಾಗಿ ಮಾರ್ಪಟ್ಟು, ಇಡೀ ಲೋಕವನ್ನು ತಮ್ಮ ಪರಮಪ್ರೇಮದ ಬಾಹುವಿನಲ್ಲಿ ತಂದುಕೊಳ್ಳುತ್ತಾರೆ. ನಮ್ಮ ಬಾಳು ಪರಮಪಾವನವಾಗುವುದಕ್ಕೆ ಈ ದಿವ್ಯಪ್ರೇಮಸಾಗರದ ಒಂದು ಹನಿಯ ಸಿಂಚನವೇ ಸಾಕು. ಮಾನಸಿಕವಾಗಿ, ಭಾವನಾತ್ಮಕವಾಗಿ, ಬೌದ್ಧಿಕವಾಗಿ ಅವರ ವ್ಯಕ್ತಿತ್ವದ ಸಂಸ್ಪರ್ಶವನ್ನು ಪಡೆದುಕೊಂಡ ಎಲ್ಲ ಭಾಗ್ಯವಂತರೂ ಅವರ ಕೃಪಾವರ್ಷದಲ್ಲಿ ಮೀಯಬಹುದು; ಬದುಕನ್ನು ಅದರ ನಿಜವಾದ ಅರ್ಥದಲ್ಲಿ ಬಾಳಬಹುದು.

### ಮೌಲ್ಯಗಳ ಉದಾತ್ತೀಕರಣ

ಇತ್ತೀಚಿನ ವರ್ತಮಾನಗಳು ಧರ್ಮವನ್ನು ಅಪಮೌಲ್ಯಗೊಳಿಸಿವೆ. ನಾವೀಗ ಯಾವುದನ್ನು ಧರ್ಮವೆಂದು ಪರಿಗಣಿಸಿದ್ದೇವೆಯೋ ಅದು ನಮ್ಮ ಬಾಳನ್ನು ಉತ್ತಮಪಡಿಸುವಲ್ಲಿ ಸಹಕಾರಿಯಾಗಿಲ್ಲ. ಅಜ್ಞಾನ–ದಾರಿದ್ರ್ಯ–ಶೋಷಣೆ–ಅನೈತಿಕತೆ–ದ್ವೇಷಾಸೂಯೆಗಳು–ಅದಕ್ಷತೆ–ಅಪ್ರಾಮಾಣಿಕತೆ – ಹೀಗೆ ಹತ್ತು ಹಲವು ಜಾಡ್ಯಗಳು ನಮ್ಮ ರಾಷ್ಟ್ರಜೀವನವನ್ನು ಮತ್ತು ವ್ಯಕ್ತಿಜೀವನವನ್ನು ಕಿತ್ತು ತಿನ್ನುತ್ತಿವೆ. ಹೀಗಾಗಿ ಕೆಲವು ಬುದ್ಧಿಜೀವಿಗಳಿಗೆ ಧರ್ಮವೆಂಬುದು 'ಸಮೂಹ ಸನ್ನಿ' ಎನಿಸಿದ್ದರೆ ಖಂಡಿತ ಅದು ಅವರ ತಪ್ಪಲ್ಲ.

ಧರ್ಮದ ಸೈದ್ಧಾಂತಿಕ ಅಪವ್ಯಾಖ್ಯಾನ ಮತ್ತು ಅನುಷ್ಠಾನರಾಹಿತ್ಯಗಳೇ ಇದಕ್ಕೆ ಕಾರಣ. ನಮ್ಮ ಬಹುತೇಕ ಧಾರ್ಮಿಕ ಸಂಸ್ಥೆಗಳು ತಮ್ಮ ಅನುಯಾಯಿಗಳನ್ನು ಸಂಕುಚಿತರನ್ನಾಗಿ ಮಾಡುತ್ತಿವೆಯೇ ಹೊರತು, ಅವರನ್ನು ನೈಜ ಆಧ್ಯಾತ್ಮಿಕ ವ್ಯಕ್ತಿಗಳನ್ನಾಗಿ ರೂಪಿಸುತ್ತಿಲ್ಲ. ಹಾಗೂ ಧರ್ಮದ ಹೆಸರಿನಲ್ಲಿ ರಾಜಕೀಯ ಮತ್ತು ಭ್ರಷ್ಟಾಚಾರಗಳೇ ಹಲವು ಕಡೆ ಕಾಣಬರುತ್ತಿವೆ. ಇದಕ್ಕೆ ಕಾರಣ ಧರ್ಮದ ನೈಜ ತಿರುಳಾದ ಆಧ್ಯಾತ್ಮಿಕ ಸಿಂಚನವನ್ನು ಜನರು ಪಡೆದುಕೊಂಡಿಲ್ಲ. ಮೇಲುನೋಟದ ಬಾಹ್ಯಾಚಾರಗಳಿಗೆ ಮನಸ್ಸು ಕೊಟ್ಟ ಅವರ ಮನಸ್ಸುಗಳಿಗೆ ಅವುಗಳೆಲ್ಲದರ ಆಧಾರ ಮತ್ತು ಹಿನ್ನೆಲೆಯಾದ ಆಧ್ಯಾತ್ಮಿಕ ಮೌಲ್ಯಗಳ ಪರಿಚಯವಾಗಿಲ್ಲ. ಇದೇ ಇಂದಿನ ದುಸ್ಥಿತಿಗೆ ಕಾರಣ.

ಶ್ರೀರಾಮಕೃಷ್ಣರಿಗೆ ಆಧ್ಯಾತ್ಮಿಕ ಮೌಲ್ಯಗಳೇ ಜೀವನದ ಸಾರಸರ್ವಸ್ವವಾಗಿದ್ದವು. ಆಧ್ಯಾತ್ಮಿಕ ಮೌಲ್ಯಗಳೇ ಮೂರ್ತಿವೆತ್ತ ವ್ಯಕ್ತಿತ್ವ ಅವರದಾಗಿತ್ತು. 'ಭಗವಂತ'ನೇ ಅವರ ಜೀವನದ ಕೇಂದ್ರಬಿಂದು ಮಾತ್ರವಲ್ಲ, ಓತಪ್ರೋತನಾಗಿದ್ದನು. ಮೊದಲು 'ದೇವರು', ನಂತರ 'ಜಗತ್ತು' ಎಂದು ಅವರು ಹೇಳುತ್ತಿದ್ದರು. ನಮ್ಮೆಲ್ಲ ಪ್ರಾಪಂಚಿಕ ಸಾಧನೆಗಳೂ 'ಸೊನ್ನೆ' ಮಾತ್ರ, ಅವುಗಳಿಗೆ ಬೆಲೆ ಬರುವುದು ಅವುಗಳ ಹಿನ್ನೆಲೆಯಲ್ಲಿ ಭಗವಂತನ ಅರಿವು ಇದ್ದಾಗ ಮಾತ್ರ ಎಂದು ಅವರು ಬೋಧಿಸಿದರು. ಎಣ್ಣೆ ಇಲ್ಲದೆ ದೀಪ ಹೇಗೆ ಉರಿಯುವುದಿಲ್ಲವೋ, ಹಾಗೆಯೇ ದೇವರಿಲ್ಲದೆ ಜೀವಿಯು ತನ್ನ ಜೀವನವನ್ನು ಸಾರ್ಥಕಪಡಿಸಿಕೊಳ್ಳಲಾರ ಎಂದೂ ಉಪದೇಶಿಸಿದರು. ಹೀಗೆ ಪ್ರಪಂಚಮುಖವಾಗಿದ್ದ ಆಧುನಿಕ ಮಾನವನ ಬಾಳನ್ನು ಭಗವನ್ಮುಖವನ್ನಾಗಿ ಪರಿವರ್ತಿಸಲು ಅವರು ಯತ್ನಿಸಿದರು. **ವಿಷಯೇ ವಿರಾಗ್ – ಈಶ್ವರೇ ಅನುರಾಗ್** – 'ವಿಷಯ ವಸ್ತುಗಳಲ್ಲಿ ವೈರಾಗ್ಯ, ಭಗವಂತನಲ್ಲಿ ಅನುರಾಗ' ಎಂಬ ಸೂತ್ರದಲ್ಲಿ ಅವರ ಜೀವನ–ಸಂದೇಶಗಳು ಮಡುಗಟ್ಟಿವೆ.

ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ವಿಸ್ತೃತ ಪರಿಚಯವು ನಮ್ಮ ಸಮಾಜದಲ್ಲಿ ನೈಜ ಆಧ್ಯಾತ್ಮಿಕ ಮೌಲ್ಯಗಳ ಪುನಃಸ್ಥಾಪನೆಗೆ ಕಾರಣವಾಗಬಲ್ಲುದು. ಆ ಮೂಲಕ ವ್ಯಕ್ತಿಗತ ಮತ್ತು ಸಾಮಾಜಿಕ ಹಿತದ ಮಂಗಳಕಾರ್ಯಕ್ಕೆ ಆಧಾರವಾಗಿ

ನಿಲ್ಲಬಲ್ಲದು. ಶ್ರೀರಾಮಕೃಷ್ಣರು ಇಡೀ ಮಾನವತೆಯನ್ನು ಪ್ರತಿನಿಧಿಸುತ್ತಾರೆ. ಹೀಗಾಗಿ ಅವರ ಜೀವನ ಸಂದೇಶಗಳು ವಿಶ್ವವ್ಯಾಪಕವಾದುವು. ಇದರಿಂದ ಜಗತ್ತಿನ ಎಲ್ಲ ವರ್ಗಗಳ ಜನರೂ ತಮ್ಮ ತಮ್ಮ ಸಾಂಪ್ರದಾಯಿಕ ನಿಲುವು, ಆಚರಣೆಗಳನ್ನು ನಷ್ಟಮಾಡಿಕೊಳ್ಳದೆ, ಉದಾರದೃಷ್ಟಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಇದೇ ಈ ಆಧುನಿಕ ಯುಗಕ್ಕೆ ಬೇಕಾಗಿರುವ ಜೀವಪೋಷಕ ಅಂಶವಾಗಿದೆ.

ನೈತಿಕ ಮತ್ತು ಕೌಟುಂಬಿಕ ಮೌಲ್ಯಗಳ ಅಧಃಪತನವೂ ಈ ಆಧುನಿಕ ಯುಗದ ಒಂದು ಪ್ರಮುಖ ಅನಿಷ್ಟವಾಗಿದೆ. ಭೋಗಾಸಕ್ತಿ, ವೈಯಕ್ತಿಕ ಹಿತಾಸಕ್ತಿ, ಸಮಷ್ಟಿಹಿತದ ನಿರ್ಲಜ್ಜ ಅನಾದರ – ಇವುಗಳು ನೈತಿಕ ಅಧಃಪತನಕ್ಕೆ ಕಾರಣವಾಗಿವೆ. 'ಕಾಮ–ಲೋಭ'ಗಳೆಂಬ ಸಾರ್ವತ್ರಿಕ ವ್ಯಾಧಿಗಳು ಆಧುನಿಕ ಮನುಷ್ಯನ ಬದುಕನ್ನು ಅಸಹನೀಯವನ್ನಾಗಿ ಮಾಡಿವೆ. ಇದಕ್ಕೆ ಶ್ರೀರಾಮಕೃಷ್ಣರ ಜೀವನ ಸಂದೇಶಗಳು ಪರಿಣಾಮಕಾರಿ ಪರಿಹಾರವನ್ನು ಒದಗಿಸಬಲ್ಲವು; ಆ ಮೂಲಕ ಮಾನವ ಜೀವನದ ಮಟ್ಟವನ್ನು ನೈತಿಕವಾಗಿ ಮೇಲೇರಿಸಬಲ್ಲವು.

ನೈತಿಕ ಮೌಲ್ಯಗಳ ಅವನತಿಯು ಕೌಟುಂಬಿಕ ವ್ಯವಸ್ಥೆಯ ಮೇಲೆ ಭೀಕರ ಪರಿಣಾಮವನ್ನು ಉಂಟುಮಾಡಿರುವುದನ್ನು ಪ್ರಸ್ತುತ ಕಾಲಾವಧಿಯಲ್ಲಿ ನಾವು ಕಣ್ಣಾರೆ ಕಾಣುತ್ತಿದ್ದೇವೆ. ಆರ್ಥಿಕ ಭದ್ರತೆ, ವ್ಯಕ್ತಿಗತ ಪ್ರತಿಷ್ಠೆಯೇ ಆದ್ಯತೆಯ ವಿಷಯಗಳಾದಾಗ ಕುಟುಂಬದ ಬಗೆಗಿನ ಆದರ, ಅಭಿಮಾನಗಳು ಕಡಮೆಯಾಗುತ್ತವೆ. ಕೌಟುಂಬಿಕ ಸಮಸ್ಯೆಗಳು ಜನರ ವೈಯಕ್ತಿಕ ಜೀವನದ ಮೇಲೆಯೂ ಅನಾಹುತಕಾರಿ ಪರಿಣಾಮಗಳನ್ನು ಬೀರುವುದು ನಿಸ್ಸಂಶಯ. ಕೌಟುಂಬಿಕ ಅಶಾಂತಿ, ಅಸ್ಥಿರತೆ ಮತ್ತು ಅಭದ್ರತೆಗಳು ಮನಸ್ಸಿನಲ್ಲಿ ನಿರಾಶಾಭಾವನೆಯನ್ನು ಉಂಟುಮಾಡುತ್ತವೆ; ಕೋಪತಾಪಗಳನ್ನು ಕೆರಳಿಸುತ್ತವೆ; ಹತ್ತು ಹಲವು ಮನೋವೈಜ್ಞಾನಿಕ ವಿಕೃತಿಗಳಿಗೆ ಎಡೆಮಾಡಿಕೊಡುತ್ತವೆ. ಅದರಲ್ಲೂ ಇವುಗಳಿಂದ ಮಕ್ಕಳ ಮೇಲಾಗುವ ದುಷ್ಪರಿಣಾಮಗಳು ಇನ್ನೂ ಭೀಕರವಾದಂಥವು.

ಕುಟುಂಬವು ಮಾನವೀಯ ಸಂಬಂಧಗಳನ್ನು ಆಧರಿಸಿರಬೇಕು; ಕೇವಲ ದೈಹಿಕ ಸಂಬಂಧವನ್ನಾಗಲಿ, ಆರ್ಥಿಕ ಹೊಂದಾಣಿಕೆಯನ್ನಾಗಲಿ ಅಲ್ಲ. ಅದಲ್ಲದೆ, ಕೌಟುಂಬಿಕ ಜೀವನಕ್ಕೆ ಆಧ್ಯಾತ್ಮಿಕ ಆದರ್ಶವೇ ಪ್ರಧಾನವಾಗಬೇಕು. ಲೌಕಿಕ ಸಮೃದ್ಧಿಯೆನ್ನುವುದು ಅದಕ್ಕೆ ಪೂರಕವಾಗಬೇಕು, ಅಷ್ಟೇ. ಯಾವ ಕುಟುಂಬದಲ್ಲಿ ಅಧ್ಯಾತ್ಮವೇ ಬಾಂಧವ್ಯದ ಬೆಸುಗೆಯಾಗುವುದೋ, ಅದರಲ್ಲಿ ಮಾತ್ರ ನಿಜವಾದ ಭದ್ರತೆ ಒದಗಿಬರುವುದು. ಆಗ ಮಾತ್ರ ಮಾನವೀಯ ಸಂಬಂಧಕ್ಕೆ ನಿಜವಾದ ಅರ್ಥ ಒದಗುವುದು. ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿಯವರ ಕೌಟುಂಬಿಕ ಜೀವನವು ಇದಕ್ಕೆ ಉಜ್ವಲ ನಿದರ್ಶನವಾಗಿದೆ. ಅವರಲ್ಲಿ ದಾಂಪತ್ಯಪ್ರೇಮವು, ಎಲ್ಲ ಲೌಕಿಕ ಪರಿಧಿಗಳನ್ನೂ ದಾಟಿಹೋಗಿ, ಆಧ್ಯಾತ್ಮಿಕ ಐಕ್ಯತೆಯ ಆಧಾರದ ಮೇಲೆ ಸ್ಥಿರವಾಗಿ ನೆಲೆಗೊಂಡದ್ದನ್ನು ನಾವು ಕಾಣಬಹುದು; ದೈಹಿಕ ಸ್ತರವನ್ನು ಮೀರಿಹೋಗಿ, ಮಾನಸಿಕ ಮತ್ತು ಆಧ್ಯಾತ್ಮಿಕ ಆಯಾಮಗಳನ್ನು ತಳೆದುದನ್ನು ಗುರುತಿಸಬಹುದು. ಆಧ್ಯಾತ್ಮಿಕ ಭಾವವು ಕುಟುಂಬವೇ ಮೊದಲಾಗಿ ಜೀವನದ ಎಲ್ಲ ಮಜಲುಗಳನ್ನೂ ಪವಿತ್ರಗೊಳಿಸಬಲ್ಲುದು ಎಂಬುದಕ್ಕೆ ಅವರಿಬ್ಬರ ನಡುವಣ ದಿವ್ಯ ಬಾಂಧವ್ಯವೇ ಸಾಕ್ಷಿ. ಇಂಥ ಆದರ್ಶವನ್ನು ಆಧಾರವಾಗಿ ಇಟ್ಟುಕೊಂಡು ಒಡಮೂಡಿದ ದಾಂಪತ್ಯಜೀವನ ಸಾತ್ವಿಕ ಶಾಂತಿ, ಸುಖಗಳನ್ನು ತಂದುಕೊಡುವುದರಲ್ಲಿ ಸಂಶಯವಿಲ್ಲ. ಇದೇ ಈಗ ಕಂಡುಬರುತ್ತಿರುವ ಕೌಟುಂಬಿಕ ವಿಚ್ಛಿದ್ರತೆಗೆ ಏಕಮಾತ್ರ ಶಾಶ್ವತ ಪರಿಹಾರ.

### ಧಾರ್ಮಿಕ ಸಮನ್ವಯಾಚಾರ್ಯ

ಇಂದಿನ ಧಾರ್ಮಿಕ ಸಂದರ್ಭವು ಅತ್ಯಂತ ಚಿಂತಾಜನಕವಾಗಿದೆ. ಮತೀಯ ದ್ವೇಷವು ವಿಪರೀತವಾದ ಹಿಂಸಾಪ್ರವೃತ್ತಿಗೆ ಎಡೆಮಾಡಿದೆ. ಹಿಂಸಾಪ್ರವೃತ್ತಿಯು ಭಯೋತ್ಪಾದನೆಗೆ ತಿರುಗಿದೆ. ಹೀಗೆ ಧರ್ಮ, ಮತ – ಇವು ವಿಚ್ಛಿದ್ರಕಾರಕಗಳು ಎಂಬಂತಾಗಿವೆ. ಇದರಿಂದ ಪ್ರಪಂಚವು ಅಭದ್ರತೆಯ ಭೀಕರ ಮಾನಸಿಕ ಜಾಡ್ಯಕ್ಕೆ ತುತ್ತಾಗಿದೆ. ವಿವಿಧ ಧರ್ಮಗಳ ನಡುವಣ ಸಾಮರಸ್ಯ ಮತ್ತು ಸಹಬಾಳ್ವೆಗಳೇ ಇದಕ್ಕೆ ಪರಿಹಾರವಾಗಬಲ್ಲವು. ಇದನ್ನೇ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳು ಪ್ರತಿಪಾದಿಸುವುದು. ಶ್ರೀರಾಮಕೃಷ್ಣರು ಧರ್ಮಸಾಮರಸ್ಯಕ್ಕೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಸ್ತಿಭಾರವನ್ನು ನೀಡುತ್ತಾರೆ. ಅವರು ಹನ್ನೆರಡು ವರ್ಷಗಳ ಕಾಲ ನಡೆಸಿದ ಸಾಧನಾಗಾಥೆಯು ಜಗತ್ತಿನ ಇತಿಹಾಸದಲ್ಲಿಯೇ ಅನುಪಮವಾದುದು. **ಜತೋ ಮತ್ ತತೋ ಪಥ್** – ಎಷ್ಟು ಮತಗಳಿವೆಯೋ, ಅಷ್ಟು ಭಗವಂತನನ್ನು ಕಾಣುವ ಪಥಗಳಿವೆ ಎಂಬ ಅವರ ವಾಣಿ, ಅವರ ಅನುಭವದ ಮೂಸೆಯಲ್ಲಿ ಪರಿಪಕ್ವವಾಗಿ ಬಂದದ್ದೇ ಹೊರತು, ಬರಿಯ ಬಾಯಿಮಾತಲ್ಲ. ಶ್ರೀರಾಮಕೃಷ್ಣರ ಜೀವನವೆಂಬುದೇ ಧರ್ಮಸಾಮರಸ್ಯದ ಅಧಿಕೃತ ಪ್ರಯೋಗಾಲಯ ಎಂದರೆ ತಪ್ಪಾಗಲಾರದು. ಇದನ್ನು ಆಧಾರವಾಗಿ ಇಟ್ಟುಕೊಂಡು, ವಿವಿಧ ಧರ್ಮ, ಮತಗಳ ಅನುಯಾಯಿಗಳ ನಡುವೆ ಪ್ರೇಮ, ಸೌಹಾರ್ದಗಳ ಸೇತುವೆಯನ್ನು ನಿರ್ಮಿಸುವ ಪ್ರಯತ್ನ ನಡೆಯಬೇಕಾದುದು ಅತ್ಯಂತ ಶೀಘ್ರವಾಗಿ ಆಗಬೇಕಾದ ಕೆಲಸ. ಶ್ರೀರಾಮಕೃಷ್ಣರ ಪ್ರಕಾರ, ಧರ್ಮಸಾಮರಸ್ಯವೆಂದರೆ, ಎಲ್ಲ ಧರ್ಮಗಳೂ ತಮ್ಮ ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಂಡು, ಇತರ ಧರ್ಮಗಳನ್ನು ಗೌರವದಿಂದ ಕಾಣುವುದು. ಇದಕ್ಕೆ ಶ್ರೀರಾಮಕೃಷ್ಣರ ಅನುಭವಗಳೇ ಪ್ರಮಾಣ. ಹೀಗೆ ಅವರ